# ಜಾತ್ರೆಗಳ ಸಾಂಸ್ಕೃತಿಕ ಅಸ್ಮಿತೆ

**ಡಾ.ಹೆಚ್.ಮಲ್ಲಿಕಾರ್ಜುನ**
**ಮುಖ್ಯಸ್ಥರು**
**ಕನ್ನಡ ಅಧ್ಯಯನ ವಿಭಾಗ**
**ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮೋಕ.**

ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ ಜಾನಪದ ಆಚರಣೆಗಳ ಮತ್ತು ಜಾತ್ರೆಗಳ ಹಿಂದಿನ ಅರ್ಥ ಅತ್ಯಂತ ವಿಶಾಲವಾದುದು. ಅನೇಕರು ಇವುಗಳನ್ನು ಗೊಡ್ಡು ಸಾಂಪ್ರದಾಯಗಳೆಂದು ತಿರಸ್ಕರಿಸುತ್ತಾರೆ. ಆದರೆ ಜನಪದ ವೈಜ್ಞಾನಿಕ ದೃಷ್ಟಿಕೋನ, ಆತ್ಮೀಯತೆ, ಅಂತ:ಕರಣ, ಮಾನವೀಯ ತುಡಿತಗಳನ್ನೊಮ್ಮೆ ಅವಲೋಕಿಸಿದರೆ ಜನಪದ ಜಾತ್ರೆಗಳ ಮಹತ್ವ ಅರ್ಥವಾಗುತ್ತದೆ. ಈ ನೆಲೆಯಲ್ಲಿ ಒಂದು ನಿರ್ದಿಷ್ಟ ಪ್ರದೇಶ ಅಥವಾ ಕ್ಷೇತ್ರದಲ್ಲಿ ಆರಾಧನೆಗೊಳ್ಳುತ್ತಿರುವ ಸ್ತ್ರೀ ದೇವತೆ ಮತ್ತು ಪುರುಷ ದೇವತೆಗಳ ಜಾತ್ರೆಗಳು ದೈಹಿಕವಾಗಿ ದುಡಿಯುವ ಕೆಲ ಸಮುದಾಯಗಳ ಸಾಂಸ್ಕೃತಿಕ ಬದುಕಿನೊಂದಿಗೆ ನಿಕಟ ಸಂಬಂಧವನ್ನು ಪಡೆದುಕೊಂಡಿರುತ್ತವೆ. ಜನಪದರಿಗೆ ಜಾತ್ರೆಗಳು ಜ್ಞಾನ, ಅಂಧಕಾರ ಮತ್ತು ಮೌಢ್ಯತೆಯನ್ನು ಕಳೆಯುವ ಬೆಳಕಿದ್ದಂತೆ. ಜಾತ್ರೆಗಳು ಜನಪದರ ಸಾರ್ಥಕ ಬದುಕಿನ ಜೀವಂತಿಕೆಯ ಸಂಕೇತವಾಗಿದೆ. "ಜಾತ್ರೆಗಳು ಸಾಮಾನ್ಯವಾಗಿ ನೈತಿಕ ಪ್ರಜ್ಞೆ ಮೂಡಿಸಿ ಶೀಲವರ್ತನೆಗಳು ಉತ್ತಮಗೊಳ್ಳುವಂತೆ ಮಾಡಿ ಬದುಕಿಗೆ ಭರವಸೆ ಮತ್ತು ಸ್ಪೂರ್ತಿಯನ್ನು ಒದಗಿಸಿ ಜಡತೆಯನ್ನು ಹೋಗಲಾಡಿಸಿ ಅವರನ್ನು ಜಾಗೃತಗೊಳಿಸುವಂತೆ ಮಾಡುತ್ತವೆ". ಬೇರೆ ಬೇರೆ ಸಂಸ್ಕೃತಿಯನ್ನು ರೂಡಿಸಿಕೊಂಡ ಸಾಮಾಜಿಕ ಗುಂಪುಗಳು ಒಟ್ಟಾಗಿ ಕಲೆತು ಪರಸ್ಪರ ಸಂಬಂಧಗಳನ್ನು ದೃಡಪಡಿಸಿಕೊಳ್ಳುವುದರ ಜೊತೆಗೆ ಹೊಂದಾಣಿಕೆಯನ್ನು ರೂಡಿಸಿಕೊಳ್ಳಲು ಈ ಜಾತ್ರೆಗಳು ಅವಕಾಶ ಕಲ್ಪಿಸಿಕೊಡುತ್ತವೆ.

ಜಾತ್ರೆ ಮತ್ತು ಜಾನಪದ ಆಚರಣೆ ಹಂಪನಾ ಅವರ 'ಕರ್ನಾಟಕ ಜಾತ್ರೆಗಳು' ನಮ್ಮ ನಾಡಿನ ಹಲವಾರು ಕಡೆ ನಡೆಯುವ ವಿವಿಧ ದೇವತೆಗಳ ಜಾತ್ರೆಗಳು ಸಂಕ್ಷಿಪ್ತ ವಿಧಗಳನ್ನು ಮತ್ತು "ಅಪರೂಪದ ಚಿತ್ರಗಳನ್ನು" ಒಳಗೊಂಡಿದೆ. ಗ್ರಂಥದ ಆರಂಭದಲ್ಲಿ ಲೇಖಕರು ಜಾತ್ರೆಗೆ ಸಂಬಂಧಿಸಿದ ಕೆಲವು ವಿಷಯಗಳ ಕುರಿತು ಚರ್ಚೆ ಮಾಡಿದ್ದಾರೆ. ಅವರು ಕೊಡುವ ಜಾತ್ರೆಯ ವ್ಯಾಖ್ಯೆ ಇದು "ಯಾವುದೋ ಒಂದು ನಿಗದಿತವಾದ ವೇಳೆಯಲ್ಲಿ ಜನರೆಲ್ಲ ಸೇರಿ ದೇವರನ್ನು ಆರಾಧಿಸುವುದು." " ಜಾತ್ರೆ ಎಂಬುದು ವರ್ಷಕ್ಕೂ, ನಿಗದಿಯಾದ ಇನ್ನಿತರ ಅವಧಿಗೋ ಗೊತ್ತಾದ ಸ್ಥಳದಲ್ಲಿ ಒಂದು ದಿನವೊ ಇನ್ನೂ ಹೆಚ್ಚಿನ ದಿನಗಳವರೆಗೂ ಜನ ಸೇರಿ ನಡೆಸುವ ಉತ್ಸವ". ಜಾತ್ರೆಗಳು ಯಾವುದೊ ಒಂದು ಕಾರಣಕ್ಕೆ ಯಾರೊ ಪ್ರಾರಂಭಿಸಿದ ಸಾಮೂಹಿಕ ಆಚರಣೆಗಳು. ಜಾತ್ರೆಗಳು ಮೊದಲು ಧಾರ್ಮಿಕ ಆಚರಣೆಗಳಿಗೆ ಸೀಮಿತವಾಗಿದ್ದು ನಂತರ ಅವುಗಳು ವಿವಿಧ ಬಗೆಯ ಆಯಾಮಗಳಿಗೆ ವಿಸ್ತರಿಸಿಕೊಂಡಿವೆ. ಇವುಗಳಲ್ಲಿ ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಅಂಶಗಳು ಅಭಿವ್ಯಕ್ತಗೊಳ್ಳುತ್ತವೆ. "ಧಾರ್ಮಿಕ ಸ್ವರೂಪದ ಹಬ್ಬ ಕಾಲಕ್ರಮೇಣ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಪಡೆದು ಕೊನೆಗೆ ವಾಣಿಜ್ಯ ರೂಪವನ್ನು ಪಡೆದುಕೊಂಡಾಗ ಜಾತ್ರೆಯಾಯಿತು". ಜನಪದ ಸಾಂಸ್ಕೃತಿಯ ಪ್ರತೀಕವಾದ ಜಾತ್ರೆಗೆ ಮಾನವ ಶಾಸ್ತ್ರದ ಅಧ್ಯಯನದಿಂದ ಹಿಂದಿನ ಮಾನವನು ತನ್ನ ನಾಗರಿಕತೆ ಹಂತದಲ್ಲಿ ಅನೇಕ ಆಚರಣೆಗಳನ್ನು ಜೀವನದಲ್ಲಿ ರೂಪಿಸಿಕೊಂಡಿದ್ದು ತಿಳಿದುಬರುತ್ತದೆ. ಆದುದರಿಂದಲೇ ಇವುಗಳ ಆಚರಣೆಗಳಿಗೆ ಜಾತ್ರೆವೆಂಬ ವೇದಿಕೆಯನ್ನು ನಿರ್ಮಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಕೇವಲ ಕುಟುಂಬದ ವ್ಯಕ್ತಿಗಳಿಗೆ ಮಾತ್ರ ಸಿಮಿತವಾಗಿದ್ದ ಈ ಆಚರಣೆಗಳು ಜನಸಂಖ್ಯೆ ಬೆಳೆದಂತೆ, ನಾಗರಿಕತೆ ವಿಕಾಸಗೊಂಡಂತೆ, ಕುಟುಂಬದ ಚೌಕಟ್ಟನ್ನು ಮೀರಿ ಸಮಾಜದ ಚೌಕಟ್ಟನ್ನು ಪಡೆದು ನಮ್ಮ ಸಂಸ್ಕೃತೀಯ ಭಾಗವಾಗಿ ರೂಪಗೊಂಡವು. ಎನ್ನುವುದು ವಿದ್ವಾಂಸರ ಅಭಿಪ್ರಾಯವಾಗಿದೆ. ಇಂದಿನ ಜಾಗತೀಕರಣ ಮತ್ತು ಅಧುನೀಕರಣದ ಸುಳಿಗೆ ಸಿಕ್ಕು ಕ್ಲಿಷ್ಟ ಪರಿಸ್ಥಿತಿ ಮತ್ತು ಉದ್ವೇಗದಲ್ಲಿ ಬದುಕುತ್ತಿರುವ ಮಾನವನಿಗೆ ಜಾತ್ರೆಗಳು ವರ್ಷಕ್ಕೊಮ್ಮೆಯಾದರೂ ತಮ್ಮ ಜನರೊಂದಿಗೆ ಬಂಧುಗಳೊಂದಿಗೆ ಬೆರೆತು ಸುಃಖ ದುಃಖ ಹಂಚಿಕೊಂಡು ಸಹಬಾಳ್ವೆಯಿಂದ ಜೀವನ ನಡೆಸಲು ಇಂದಿನ ಜಾತ್ರೆಗಳು ಸ್ವಲ್ಪ ಮಟ್ಟಿಗಾದರೂ ಕಾರಣಿಭೂತಿಯಾಗಿವೆ ಎಂಬುವುದರಲ್ಲಿ ಎರಡುಮಾತಿಲ್ಲ. ಇಂದಿನ ನಗರೀಕರಣದ ಪ್ರಭಾವದಿಂದಾಗಿ ನಮ್ಮ ಗ್ರಾಮೀಣ ಸಂಸ್ಕೃತಿಯ ಕುರುಹುಗಳಾದ ಜಾನಪದ ಕಲೆಗಳು, ನೃತ್ಯಗಳು, ವೇಷಭೂಷಣಗಳು, ಗ್ರಾಮೀಣ ಕ್ರೀಡೆಗಳು ಶಕ್ತಿ ಪ್ರದರ್ಶನಗಳು ಮತ್ತು ಬಯಲಾಟಗಳು ನಶಿಸಿ ನಮ್ಮಿಂದ ದೂರವಾಗುತ್ತೀರುವ ಈ ಸಂದರ್ಭದಲ್ಲಿ ಅವುಗಳನ್ನು ಉಳಿಸಿ ಬೆಳೆಸಿ ಪೋಷಿಸಿಕೊಂಡು ಬರುವಲ್ಲಿ ಇಂದಿನ ಜಾತ್ರೆಗಳ ಪಾತ್ರ ಚಿರಸ್ಮರಣೀಯವಾದುದು. ಹರಕೆ, ಆಚರಣೆಗಳು 'ಹರಕೆ' ಎಂಬುದು ನಮ್ಮ ಜಾನಪದ ಆಚರಣೆಯ ಒಂದು ಬಗೆ. ನನಗೆ ಒಳ್ಳೆಯದಾಗಲಿ, ನನ್ನ

ಆಶೆ, ಬಯಕೆ ಈಡೇರಲಿ, ನನ್ನ ಬಯಕೆ ಈಡೇರಿದರೆ ನಿನಗೆ ಏನನ್ನಾದರೂ ನೀಡುತ್ತೇವೆ. ಎಂದು ಬೇಡಿಕೊಂಡು ಅದನ್ನು ನೀಡಿದ ಮಾತಿನಂತೆ ಅದನ್ನು ನೆರವೇರಿಸುವುದೇ, ಪೂರೈಸುವ ುದೇ, ಹರಕೆ. ಅದನ್ನು ಜಾನಪದ ಭಾಷೆಯಲ್ಲಿ ದೇವಿಗೆ ಹರಕೆ ತೀರಿಸುವುದು, ಹರಕೆ ಇಡೇರಿಸುವುದು ಎಂದು ಕರೆಯಲಾಗುತ್ತದೆ. 'ಪ್ರಕೃತಿಯಲ್ಲಿನ ಅನಂತ ಶಕ್ತಿಯನ್ನು ಒಲಿಸಿಕೊಳ್ಳಲು /ಪ್ರಸನ್ನಗೊಳಿಸಲು ಜನಪದರು ನಡೆಸಿಕೊಂಡು, ಆಚರಿಸಿಕೊಂಡು ಬಂದ ಹಲವು ಬಗೆಯ ಆಚರಣೆಗಳಲ್ಲಿ ಇದು ಒಂದು' (ಡಾ. ಹಂಪ ನಾಗರಾಜಯ್ಯ). ಪ್ರಕೃತಿಯಲ್ಲಿರುವ ಎಲ್ಲ ಜೀವಿಗಳಿಗೂ ಹುಟ್ಟು ಮತ್ತು ಸಾವು ಕಡ್ಡಾಯ ಇದು ಪ್ರಕೃತಿಯ ಸಹಜ ನಿಯಮ, ಇದನ್ನು ಮೀರಿ ನಡೆಯಲು ಯಾರಿಗೂ ಸಾಧ್ಯವಿಲ್ಲ ಮಾನವನು ತಾನು ಹಾಕಿಕೊಂಡ ನಿಯಮಗಳು ಮತ್ತು ಪ್ರಕೃತಿಯಲ್ಲಿ ನಡೆಯುವ ನೈಸರ್ಗಿಕ ನಿಯಮಗಳ ಮಧ್ಯೆ ಯಾವಾಗಲೂ ಸಂಘರ್ಷ ನಡೆಯುತ್ತಲೇ ಇರುತ್ತದೆ. ಮನುಷ್ಯನಿಗೆ ರೋಗರುಜಿನುಗಳ ಬರುವುದು ಸಹಜ ಪ್ರಕ್ರಿಯೆ. ಹೀಗೆ ರೋಗರುಜಿನುಗಳು ಬಂದಾಗ ಉತ್ತಮ ಆರೋಗ್ಯ ಕಾಪಾಡಿಕೊಳ್ಳುವುದು ಅವನಿಗೆ ಅನಿವಾರ್ಯ ಮತ್ತು ಅತ್ಯಂತ ಅವಶ್ಯಕವಾಗಿರುತ್ತದೆ. ಮನುಷ್ಯನು ತನ್ನ ರೋಗಗಳಿಗೆ ದೇವರು ಕಾರಣ ಎಂದು ಊಹಿಸಿಕೊಂಡು, ಅವನು ನಮ್ಮ ಮೇಲೆ ಮುನಿಸಿಕೊಂಡಿದ್ದಾನೆ, ಕೋಪಗೊಂಡಿದ್ದಾನೆ. ಎಂದು ತಿಳಿದು ದೇವರಲ್ಲಿ ಹರಕೆ ಹೊರುವುದು, ಬಲಿಯನ್ನು ಕೊಡುವುದು ಹೀಗೆ ಅನೇಕ ಆಚರಣೆಗಳನ್ನು ಧಾರ್ಮಿಕ ವಿಧಿವಿಧಾನಗಳನ್ನು ನಡೆಸಿಕೊಂಡು ಬಂದಿದ್ದಾನೆ. ಅದರ ನಂಬಿಕೆಯಂತೆ ರೋಗರುಜಿನುಗಳು, ಸಂಕಷ್ಟಗಳು ದೂರವಾಗಿವೆ, ಪರಿಹಾರಗೊಂಡಿವೆ ಎಂಬ ದೈವವಾದ ನಂಬಿಕೆಗಳು ಅದರಲ್ಲಿವೆ. ಕೆಲವು ಸಂದರ್ಭಗಳಲ್ಲಿ ಜನರು ಅದರಲ್ಲೂ ಮುಖ್ಯವಾಗಿ ಗ್ರಾಮೀಣರು ಅನೇಕ ಮಾನಸಿಕ ಮತ್ತು ದೈಹಿಕ ಕಾಯಿಲೆಗಳಿಗೆ, ರೋಗರುಜಿನುಗಳಿಗೆ ತುತ್ತಾಗಿ ಅವುಗಳಿಂದ ಚೇತರಿಸಿಕೊಳ್ಳಲಾಗಿದೇ ಸಂಕಷ್ಟಕೀಡಾಗಿರುವ ಉದಾಹರಣೆಗಳು ಸಾಕಷ್ಟಿವೆ. ಹೀಗೆ ಅವುಗಳ ಪರಿಹಾರಕ್ಕಾಗಿ ದೇವರಿಗೆ ಬಲಿಯನ್ನು ಕೊಡುವುದು ಹಾಗೂ ಬೇರೆ ಬೇರೆ ರೂಪದಲ್ಲಿ ಹರಕೆ ಹೊರವುದು ಜನಪದರ ಸಾಮಾನ್ಯ ವಾಡಿಕೆ. ಜನಪದ ನಂಬಿಕೆಗಳು ಜಾನಪದದ ಪ್ರಕಾರ 'ನಂಬಿಕೆ ಎಂದರೆ ಒಂದು ಹೇಳಿಕೆ, ವಸು ್ತ ಸ್ಥಿತಿಯ ಬಗ್ಗೆ ಮಾನಸಿಕ ಒಪ್ಪಿಗೆಯನ್ನು ತೋರುವ ಪ್ರವೃತ್ತಿ, ಜನಪದರ ಜೀವನದಲ್ಲಿ ಹಾಸುಹೋಕ್ಕಾಗಿರುವ ಈ ನಂಬಿಕೆಗಳು ಜನತೆಯ ಆಂತರೀಕ ಹಾಗೂ ಮೂಲ ಸಂಸೃತಿ ಮತ್ತು ಸಾಂಪ್ರದಾಯವನ್ನು ಪರಿಚಯಿಸುವ ಪ್ರಮುಖ ಸಾಧನಗಳಾಗಿವೆ. ಎಷ್ಟೋ ವೇಳೆ ಇವು ಜನಪದರ ಬಾಳನ್ನು ನಿರ್ದೇಶಿಸುತ್ತವೆಂದರೆ ಅತಿಶಯೋಕಿ ್ತಯಾಗಲಾರದು. ನಂಬಿಕೆಗಳಲ್ಲಿ ಕೆಲವು ಮೂಢನಂಬಿಕೆಗಳು, ಕೆಲವು ವೈಜ್ಞಾನಿಕ ನಂಬಿಕೆಗಳು, ಸತ್ಯ, ಸಾಮಾನ್ಯ ಜ್ಞಾನ, ಪೌರಾಣಿಕ ಐತಿಹ್ಯ ಹಾಗೂ ಕಥಾಂಶಗಳನ್ನು ಒಳಗೊಂಡಿವೆ. ಜನಪದ ನಂಬಿಕೆಗಳು ಜನಜೀವನದಲ್ಲಿ ಚಲಾವಣೆಯಲ್ಲಿರುವ ನಾಣ್ಯಗಳು, ಜನಪದರ ಜೀವಾನುಭವದ ಮೂಸೆಯಿಂದ ಮೂಡಿಬಂದು ಅವರ ಬದುಕಿನಲ್ಲಿ ಬೆರೆತು ಜೀವಂತವಾಗಿವೆ. ಜಾನಪದ ನಂಬಿಕೆಗಳು ಜನತಾನುಭವದ ಅಭಿವ್ಯಕ್ತಿ ಮತ್ತು ಅವರ ಪರಂಪರಾಗತ ಜ್ಞಾನಸುಧೆ. ಜಾನಪದ ನಂಬಿಕೆಗಳು ಜನತೆಯ ಬದುಕನ್ನೆ ನಿಯಂತ್ರಿಸಿ, ನಿರ್ದೇಶಿಸುವ ವಿಶಿಷ್ಟ ಶಕ್ತಿಯಾಗಿ ಮತ್ತಷ್ಟು ಹರಿತವಾಗಿ ಪ್ರಕಾರವಾಗಿ ಜನತೆಯ ಜೀವನದಲ್ಲಿ ಆಳವಾಗಿ ಬೇರುಬಿಟ್ಟಿವೆ. ಜನತೆಯ ಬದುಕಿಗೆ ವಜ್ರ ಕವಚವಾಗಿವೆ. ಜನಪದ ನಂಬಿಕೆಗಳು ಸಂಸ್ಕೃತಿಯ ತಾಯಿಬೇರು. ಏಕೆಂದರೆ ಸಂಸ್ಕೃತಿಗೆ ಸಂಬಂಧಿಸಿದ ಹಾಗೂ ಎಲ್ಲ ಬಗೆಯ ವಿಶೇಷ ಜ್ಞಾನವೂ ನಂಬಿಕೆಗಳ ಆಧಾರದ ಮೇಲೆ ಹುಟ್ಟಿ ಬೆಳವಣಿಗೆ ಹೊಂದುತ್ತದೆ. "ಜನಪದ ನಂಬಿಕೆಗಳ ಉಗಮ ಮಾನವನ ಹುಟ್ಟಿನೊಂದಿಗೆ ಆಯಿತು. ಮಾನವ ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಭಾಷೆಯನ್ನು ಮಾಧ್ಯಮವಾಗಿ ಮಾಡಿಕೊಂಡಾಗಲೇ ಭಾಷೆಯ ಜೊತೆಯಲ್ಲಿಯೇ ನಂಬಿಕೆಗಳು ಹುಟ್ಟಿಕೊಂಡವು"

ಜಾತ್ರೆ ಮತ್ತು ಸಾಮಾಜಿಕತೆಯ ಸ್ವರೂಪ-ದರ್ಶನ ಜಾತ್ರೆ ಮತ್ತು ಸಮಾಜಕ್ಕೆ ನಿಕಟವಾದ ಸಂಬಂಧವಿದೆ. ಜಾತ್ರೆಯಲ್ಲಿನ ಅನೇಕ ಬಗೆಯ ಆಚರಣೆ, ನಂಬಿಕೆ ಮತ್ತು ಸಾಂಪ್ರದಾಯಗಳೆಲ್ಲವು ಸಮಾಜದ ಕ್ಷೇಮಕ್ಕಾಗಿ, ಬಂಧು ಬಳಗದವರನ್ನು ಹತ್ತಿರ ತರುವುದಕ್ಕಾಗಿ ನಡೆಯುತ್ತಿರುತ್ತವೆ. ಜಾತ್ರೆ ಮತ್ತು ವ್ಯವಸ್ಥೆಯ ಸ್ತರಗಳಲ್ಲಿನ ನಿರ್ಬಂಧಗಳಿಗೂ ಅನುಗುಣವಾಗಿ ನಡೆಯುತ್ತಿವೆ. ಭಾರತೀಯ ಸಮಾಜದಲ್ಲಿರುವ ಪ್ರತಿಯೊಂದು ಜಾತಿ ಮತು ್ತ ಉಪಜಾತಿಗಳಿಗೂ ತನ್ನದೇ ಆಗಿರುವ ರಕ್ಷಕ ದೇವರಿದ್ದಾನೆ. ಅಂತಹ ದೇವರಿಗೆ ನಡೆದುಕೊಳ್ಳುವುದು ಸಾಮಾನ್ಯವಾಗಿ ಒಂದೇ ಜಾತಿಯವರಾಗಿರುತ್ತಾರೆ. ಉದಾಹರಣೆ ಕುರುಬ ಜನಾಂಗದವರು ಬೀರಪ್ಪ, ವೀರಶೈವರು ವೀರಭದ್ರನನ್ನು ವೈಷ್ಣವರು ವಿಷ್ಣುವನ್ನು ಕುರಿತು ನಡೆದುಕೊಳ್ಳುತ್ತಾರೆ. ಹೀಗೆ ಒಂದೇ ಕಡೆ ಸೇರುವ ಜನತೆಯೂ ತಮ್ಮದೇ ಆದ ಸಂಪ್ರದಾಯ ಆಚರಣೆ, ರೂಡಿ. ನೀತಿ ನಿಯಮಗಳನ್ನು ಜಾತ್ರೆಯಲ್ಲಿ ಉಳಿಸಿ ಬೆಳೆಸಿಕೊಂಡು ಬರುತ್ತಾರೆ. ಇವರಲ್ಲಿ ತಾವೆಲ್ಲರೂ ಒಂದೇ ಎಂಬ ಭಾವನೆಯು ಮೂಡಿರುತ್ತದೆ. ಜಾತ್ರೆಗಳು ಜನಸಾಮಾನ್ಯರ ನಡುವೆ ಹುಟ್ಟಿ ಬೆಳೆದುದರಿಂದ ಜನಪದರ ಸಾಮಾಜಿಕ ಜೀವನಕ್ಕೆ ಇವು ಹತ್ತಿರವಾಗುತ್ತಿವೆ. ಜಾತ್ರೆಗಾಗಿ ಬೇರೆ ಬೇರೆ ಊರುಗಳಿಂದ ಬರುವ ನೆಂಟರು ಬೀಗರನ್ನು ಆಮಂತ್ರಿಸುವುದು ಅವರ ಧರ್ಮ ಮತ್ತು ಕರ್ತವ್ಯ, ಆದರೆ ಜಾತಿವಾರು ಕೆಲಸಗಳನ್ನು ಮಾಡಬೇಕೆಂದು ಹಂಚಿಕೆ ಮಾಡಿರುತ್ತಾರೆ ಆದರೂ ಊರೊಟ್ಟಿನ ಸಂಬಂಧಗಳು ಗಟ್ಟಿಗೊಂಡಿರುವುದು ಕಂಡುಬರುತ್ತದೆ. "ಗ್ರಾಮದ

ಒಗ್ಗಟ್ಟು, ಸಮಗ್ರತೆ, ಅಭಿಯಾನ ಈ ಜಾತ್ರೆಗಳಲ್ಲಿ ಎಷ್ಟು ಜಾಗೃತವಾಗಿರುತ್ತದೆಂದರೆ ತಮ್ಮ ಊರು, ಸಂಭಾವಿತರ ಊರು, ಉಪಕಾರಿಗಳ ಊರು ಎಂದು ಹೊಗಳಿಸಿಕೊಳ್ಳಲು ಎಂಥ ತ್ಯಾಗ ಮಾಡಲೂ ಜನ ನಾಮುಂದು–ತಾಮುಂದು ಎನ್ನುತ್ತಾರೆ. ಜಾತ್ರೆಗೆಂದು ಬರುವ ಊರ ಹೆಣ್ಣುಮಕ್ಕಳಿಗೆ, ಸೊಸೆಯಂದಿರಿಗೆ ವಿಶೇಷ ಉಪಚಾರ ಸಿಗುತ್ತದೆ. ತಮ್ಮ ಊರನ್ನು ಎಲ್ಲರೂ ಹೊಗಳಬೇಕು, 'ನಮ್ಮೂರ ಜಾತ್ರೆ' ಯ ವೈಭವ ಹೇಳಬೇಕು ಎಂದು ಎಲ್ಲರ ಆಸೆ." ಎಂಬ ವಿದ್ವಾಂಸರ ಚಿಂತನೆಯಲ್ಲಿ ಜಾತ್ರೆ ಮತ್ತು ಸಮಾಜಕ್ಕಿರುವ ಮಹತ್ವವು ತಿಳಿಯುತ್ತದೆ. ಭಾರತೀಯ ಸಮಾಜ ಶ್ರೇಣಿಕೃತವಾದ ಸಮಾಜ. ಇಲ್ಲಿ ಕಂದಾಚಾರ, ಮೂಢನಂಬಿಕೆ, ಮೌಢ್ಯತೆ, ಬಡತನ ಹಾಗೂ ನಿರುದ್ಯೋಗದಂತಹ ಅನೇಕ ಸಮಸ್ಯೆಗಳು ತುಂಬಿತುಳುಕುತ್ತಿವೆ. ಸಾಮಾನ್ಯವಾಗಿ ನಮ್ಮ ಗ್ರಾಮೀಣ ಸಮಾಜದಲ್ಲಿ ಕೆಳಜಾತಿಯವರು ಹಾಗೂ ಸ್ತ್ರೀಯರ ಮೇಲೆ ಅಧಿಕ ಒತ್ತಡಗಳಿರುತ್ತವೆ. ಈ ಒತ್ತಡಗಳಿಂದ ಮಾನಸಿಕ ನೆಮ್ಮದಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಹೀಗೆ ಸಮಾಜದಲ್ಲಿನ ಒತ್ತಡಗಳಿಂದ ಬೇಸತ್ತು ಅದನ್ನು ನಿಭಾಯಿಸಿಕೊಳ್ಳುವುದಕ್ಕೆ ದೇವರ ಸಹಾಯವನ್ನು ಪಡೆಯುತ್ತಾರೆ. ದೈವದ ಕೃಪೆಗೆ ಒಳಗಾದವರನ್ನು ಸಮಾಜ ನೋಡುವ ದೃಷ್ಟಿಕೋನವೇ ಬೇರೆಯಾಗಿದೆ. ಸ್ತ್ರೀಯರನ್ನು ದೇವದಾಸಿಯರಾಗಿ, ಪುರುಷರು ಜೋಗಪ್ಪರಾಗಿ ಮುತ್ತು ಕಟ್ಟಿಸಿಕೊಂಡಾಗ ಅವರ ಮನೋಸ್ಥಿತಿಗಳೇ ಬೇರೆಯಾಗಿರುತ್ತವೆ. ಇವರೆಲ್ಲರೂ ಸಮಾಜದ ಒತ್ತಡಗಳಿಗಾಗಿ ಈ ಸಂಪ್ರದಾಯಗಳನ್ನು ಅನುಸರಿಸುತ್ತಾ ಬರುತ್ತಿದ್ದಾರೆ. ನಪುಂಸಕತ್ವ, ಸೋಮಾರಿತನ, ಮಾನಸಿಕ ದುರ್ಬಲತೆ, ಲೈಂಗಿಕ ಅತೃಪ್ತಿ, ಕೌಟುಂಬಿಕ ಕಲಹಗಳಿಂದ ಜೋಗಪ್ಪ ದೇವದಾಸಿಯರಾಗಿರುವುದನ್ನು ಕಾಣಬಹುದಾಗಿದೆ. ಇವರನ್ನು ಭಿಕ್ಷಾಟನೆ ಪ್ರವೃತ್ತಿಯ ಹಾದಿ ಹಿಡಿಯುವಂತೆ ಅವಕಾಶವನ್ನು ಕಲ್ಪಿಸಿದೆ. ಇವರಿಗೆ ವೈಚಾರಿಕೆಯ ನೆಲೆಯಲ್ಲಿ ಶಿಕ್ಷಣ, ಉದ್ಯೋಗಗಳನ್ನೇ ಕಲ್ಪಿಸಿಕೊಟ್ಟರೆ ಇವರು ಮೂಢನಂಬಿಕೆ, ಮೌಢ್ಯತೆಯಂತಹ ಸಾಮಾಜಿಕ ಕಂದಾಚಾರಗಳಿಂದ ದೂರವಾಗಿ ನಮ್ಮ ಸಮಾಜದಲ್ಲಿ ಗೌರವಯುತ ಜೀವನ ನಡೆಸಬಹುದು. ಇದರಿಂದ ನಮ್ಮ ಸಾಮಾಜಿಕ ಪರಿಸ್ಥಿತಿ ಸುಧಾರಣೆಯಾಗಬಹುದು. ಜಾತ್ರೆಯು ನಮ್ಮ ಗ್ರಾಮೀಣ ಸಮುದಾಯದಲ್ಲಿ ಒಗ್ಗಟ್ಟಿನ ರೂಪವಾಗಿದ್ದು ಜಾತ್ರೆ ಮತ್ತು ಸಮಾಜವು ಒಂದರೊಳಗೊಂದು ಸೇರಿಕೊಂಡು ಊರಿನ ವಿವಿಧ ಜಾತಿ, ಜನಾಂಗದವರನ್ನು ಸೇರಿ ಒಂದೇ ಮನಸ್ಸಿನಿಂದ ಜಾತ್ರೆಯಲ್ಲಿನ ಕೆಲಸ ಕಾರ್ಯಗಳನ್ನು ನೇರವೇರಿಸುವಂತೆ ಮಾಡುತ್ತವೆ. ನಾಡಿನ ಬೇರೆ ಬೇರೆ ಭಾಗಗಳಿಂದ ಜಾತ್ರೆಗೆ ಬರುವ ಜನಪದ ಸಮುದಾಯದವರು ದೇವಸ್ಥಾನದ ಆವರಣದ ವ್ಯಾಪ್ತಿಯೊಳಗೆ ಇಲ್ಲವೇ ಊರಿನ ವ್ಯಾಪ್ತಿಯೊಳಗೆ ಗುಂಪು ಗುಂಪಾಗಿ ಬಿಡಾರವನ್ನು ಹೂಡಿರುತ್ತಾರೆ. ಅವರೆಲ್ಲರೂ ಭಕ್ಷ್ಯ ಭೋಜನಗಳನ್ನು ತಯಾರಿಸಿ ಒಬ್ಬರಿಗೊಬ್ಬರು ಹಂಚಿಕೊಂಡು ತಿನ್ನುತ್ತಾರೆ. ಪರಸ್ಪರವಾಗಿ ಕಷ್ಟಸುಖಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಸ್ನೇಹ ಸಂಬಂಧಗಳಿಂದ ಬೆಳೆಸಿಕೊಳ್ಳುತ್ತಾರೆ. ಯುವಕ ಯುವತಿಯರು ಪರಸ್ಪರವಾಗಿ ಮೆಚ್ಚಿ ತಂದೆ–ತಾಯಿಯರ ಒಪ್ಪಿಗೆ ಪಡೆದು ವಿವಾಹವಾಗುವುದುಂಟು. ಜಾತ್ರೆ ಬಹುಮುಖಿಯಾಗಿ ಜನಸಮುದಾಯಗಳು ಅಶೋತ್ತರಗಳನ್ನು ಪೂರೈಸುವ ಸಾಧನವಾಗಿದೆ. ಜಾತ್ರೆಯೊಂದಿಗಿನ ಈ ಬಗೆಯ ಸಂಬಂಧವು ಬಿಡಿ ಬಿಡಿಯಾಗಿರುವದಿಲ್ಲ. ವ್ಯಕ್ತಿ ವ್ಯಕ್ತಿಗಳ ನಡುವೆ ಜಾತಿ ಜಾತಿಗಳ ಮಧ್ಯೆ ಜಗಳ ವೈಷಮ್ಯಗಳು ಉಂಟಾಗಿದ್ದರೂ ಅನೇಕ ವೇಳೆಯಲ್ಲಿ ಜಾತ್ರೆಯಲ್ಲಿ ಬಗೆಹರಿಸಿಕೊಂಡು, ನಾವೆಲ್ಲರೂ ಒಂದು ತಾಯಿಯ ಮಕ್ಕಳೆಂದು ಭಾವಿಸಿ ದೇವತೆಯ ಜಾತ್ರೋತ್ಸವವನ್ನು ನೆರವೇರಿಸುವುದನ್ನು ಕಾಣಬಹುದು. ಹೀಗೆ ಜಾತ್ರೆ ಹೊಸ ಹೊಸ ಸಂಬಂಧಗಳನ್ನು ಬೆಳೆಸುವ ಕೆಟ್ಟು ಹೋದ ಸಂಬಂಧಗಳನ್ನು ಸರಿಪಡಿಸಿ ಜನತೆಯಲ್ಲಿ ಸೌಹಾರ್ದತೆಯನ್ನು ಮೂಡಿಸುವ ಆಚರಣೆಯಾಗಿ ಯುವ ಸಮಾಜದಲ್ಲಿ ಕ್ರಿಯಾಶೀಲವಾಗಿದೆ. ಸ್ನೇಹ ಸಹಬಾಳ್ವೆಯ ಪ್ರತಿಕವಾಗಿಯೋ ಜಾತ್ರೆಗಳು ಜನಪದರಲ್ಲಿ ಮಹತ್ವದ ಭೂಮಿಕೆಯನ್ನು ನಿಭಾಯಿಸುತ್ತಿವೆ.

ಜಾತ್ರೋತ್ಸವಗಳು ಜನಪದ ಸಾಂಸ್ಕೃತಿಕ ಪರಂಪರೆಯ ಪ್ರಮುಖ ಆಧಾರ ಸ್ತಂಭಗಳು. ಇವುಗಳು ಗ್ರಾಮೀಣ ಬದುಕಿನ ಜೀವಂತ ನಾಡಿಮಿಡಿತಗಳಾಗಿವೆ. ಸಾಮಾಜಿಕ ಧಾರ್ಮಿಕ ಹಾಗೂ ಕಲಾತ್ಮಕ ಬದುಕಿನ ಜೀವಸತ್ವ ಅಲ್ಲಿ ಹಲವು ಮುಖಗಳಲ್ಲಿ ವ್ಯಕ್ತಗೊಂಡಿರುವುದನ್ನು ಕಾಣುತ್ತೇವೆ. ಅನಾದಿಕಾಲದಿಂದಲೂ ಮಾನವನು ತನ್ನ ನಂಬಿಕೆ ಮತ್ತು ಸಂಪ್ರದಾಯಗಳನ್ನು ಜಾತ್ರೆಗಳ ಮೂಲಕ ಆಚರಿಸಿಕೊಂಡು ಬರುತ್ತಿರುವುದರಿಂದ ಜಾತ್ರೆಗಳ ಅಧ್ಯಯನ ಬಹ ುಮುಖ ಸಂಸ್ಕೃತಿಗಳ ಅಧ್ಯಯನವಾಗಿದೆ. ಜಾತ್ರೆ ಕೇವಲ ಜನ–ದನ ವ್ಯಾಪಾರ ವೈವಾಟುಗಳ ಕೇಂದ್ರವಷ್ಟೇ ಅಲ್ಲ ಅದೊಂದು ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಗಮ. ಒಂದೊಂದು ಜಾತ್ರೆಯು ಒಂದೊಂದು ಗ್ರಾಮದ ಗ್ರಾಮದೇವತೆಯ ಹಿನ್ನೆಲೆಯನ್ನೂ ಧಾರ್ಮಿಕ ಹಾಗು ಸಾಂಸ್ಕೃತಿಕ ಮಹತ್ವವನ್ನು ಒಳಗೊಂಡಿರುತ್ತದೆ. ಜಾತ್ರೆಯ ಅಧ್ಯಯನವೆಂದರೆ ಅದೊಂದು ಸಾಂಸ್ಕೃತಿಯ ಅಧ್ಯಯನವಿದ್ದಂತೆ. ಅದರ ಹುಟ್ಟು, ಬೆಳೆವಣಿಗೆ, ಆಚಾರ ವಿಚಾರ, ನಂಬಿಕೆ, ಸಂಪ್ರದಾಯಗಳು ಇವೆಲ್ಲವನ್ನು ಮೈಗೂಡಿಸಿಕೊಂಡಿರುತ್ತದೆ. ಜಾತ್ರೆಗಳು ಧಾರ್ಮಿಕ ಪ್ರಾಮುಖ್ಯತೆಯನ್ನು ಪಡೆದಿರುವಂತೆಯೇ ಸಾಮಾಜಿಕ ಮಹತ್ವವನ್ನು ಪಡೆದುಕೊಂಡಿವೆ. ಭರತ ಖಂಡದಲ್ಲಿ ಯುಗ ಯುಗಾಂತರಗಳಿಂದ ಹಲವಾರು ಧರ್ಮಗಳು ತಮ್ಮ ಪರಂಪರೆ ಮತ್ತು ಸಾಂಪ್ರದಾಯಗಳ ನೆಲೆಗಟ್ಟಿನ ಮೇಲೆ ಭದ್ರವಾಗಿ ಬೆಳೆದುಕೊಂಡು ಬಂದಿವೆ. ಈ ಧರ್ಮಗಳಲ್ಲಿ ಧರ್ಮಪ್ರಚಾರಕರು ಮತ್ತು ಅವರ ಅನುಯಾಯಿಗಳು ದೇವರೊಂದಿಗೆ ಹೊಂದಿದ ಒಂದು ನಿಕಟ ಸಂಬಂಧ ಮತ್ತು

ಅವರು ನುಡಿದಂತಹ ವಾಕ್ಯಗಳು ಸತ್ಯವನ್ನು ಸಾರಿದವಲ್ಲದೇ ಭವಿಷ್ಯದ ಆಗು ಹೋಗುಗಳ ಕುರಿತು ಅವರು ನುಡಿದ ನಿರ್ದಿಷ್ಟವಾದ ಸಂಗತಿಗಳು ಜನರನ್ನು ಆಕರ್ಷಿಸಿದವು ಮತ್ತು ಎಚ್ಚರಗೊಳಿಸಿದವು.

ಆಧಾರ ಗ್ರಂಥಗಳು


೧. ಜಾನಪದ ತಿಳುವಳಿಕೆ : ಡಾ। ಚಕ್ಕೇರಿ ಶಿವಶಂಕರ.

೨. ಹಂಪ ನಾಗರಾಜಯ್ಯ : ಕರ್ನಾಟಕ ಜಾತ್ರೆಗಳು ಕ ಸಾ ಪ ಬೆಂಗಳೂರು.

೩. ಕರ್ನಾಟಕದ ಜಾನಪದ ಆಕಾಡೆಮಿಯವರು ಪ್ರಕಟಿಸಿದ : "ಕರ್ನಾಟಕ ಜಾತ್ರೆಗಳು".

೪. ಡಾ. ತಿಮ್ಮಪ್ಪ. ಎ. ಕೆ : ಶಿವಮೊಗ್ಗ ಜಿಲ್ಲೆಯ ಜಾತ್ರೆಗಳು ಪುಟ ಸಂಖ್ಯೆ ೧೮೪.

೫. ದೇ. ಜವರೇಗೌಡ : "ಜನಪದ ಅಧ್ಯಯನ" ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ೧೯೭೬.ಸಂ– ೩೩೪.

೬. ಡಾ, ಚನ್ನಣ್ಣ ವಾಲಿಕಾರ : "ಜಾನಪದ ಲೋಕ" ಪುಟ ಸಂ೨೭.

೭. ದೇ. ಜವರೇಗೌಡ : ಜಾನಪದವಾಹಿನಿ ೧೯೯೬ ಪುಟ ೧೪೪.

೮. ಎಸ್. ಎಸ್. ಹೀರೇಮಠ : ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ, ಭಾಗ–೨ ಜಾತ್ರೆಗಳು ೧೯೯೩ ಪುಟ ೩೯,೪೮. ೯. ಡಾ. ಹಾ ಮಾ ನಾಯಕ : ಕನ್ನಡ ವಿಶ್ವಕೋಶ, ಕರ್ನಾಟಕ ಕರ್ನಾಟಕ ಸಂಪುಟ ಪುಟ ಸಂಖ್ಯೆ ೧೫೬೦.

೧೦. ಜೆ. ಎಚ್. ಲಕ್ಕಪ್ಪಗೌಡ : ಸಂ– ಮಲೆನಾಡು ಜಾನಪದ ೧೯೮೩ ಪುಟ –೧೩೦–೧೩೧.